ಡಾ|| ಎಂ.ಪಿ. ಕರ್ಕಿ : ಎಲ್ಲೆಲ್ಲಿ ಅಂಗನವಾಡಿ ಕೊಡಬೇಕೆಂದು ಈಗಾಗಲೇ ಮಂಜೂರಾಗಿ ಫಿಕ್ಸ್ ಆಗಿದೆ. ಮತ್ತೇ ಹೆಚ್ಚಿನ ಅಂಗನವಾಡಿ ದೊರೆಯುತ್ತಿಲ್ಲ. ಹಾಗೆ ಇದ್ದಾಗ ಸರ್ಕಾರ ಬಾಲವಾಡಿಗಳನ್ನು ಬಂದ್ ಮಾಡಿ ಆ ಹುಡುಗರ ಭವಿಷ್ಯವನ್ನು ಏನು ಮಾಡುವುದಕ್ಕೆ ಇಚ್ಚಿಪಡುತ್ತದೆ?

ಅಧ್ಯಕ್ಷರು : ಅದನ್ನೇ ಅವರು ಹೇಳುತ್ತಿರುವುದು, ಎಲ್ಲಿ ಅಗತ್ಯ ಇದೆ, ಎಲ್ಲಿ ಬಾಲವಾಡಿಗಳನ್ನು ಶಿಕ್ಷಣ ಇಲಾಖೆಯವರು ಮುಚ್ಚಿದ್ದಾರೆ ಅಲ್ಲಿ ಅಂಗನವಾಡಿ ಪ್ರಾರಂಭ ಮಾಡುವುದಕ್ಕೆ ಪರಿಶೀಲನೆ ಮಾಡುತ್ತೇನೆಂದು ಹೇಳಿದ್ದಾರೆ.

ಮೈಸೂರು ನಗರದಲ್ಲಿ ಕೊಳಚೆ ನಿರ್ಮೂಲನಾ ಮಂಡಲಿಯ ಮನೆಗಳು

415 -ಶ್ರೀ ಎ. ರಾಮದಾಸ್ (ಕೃಷ್ಣರಾಜ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದಲ್ಲಿ ಕಳೆದ 4 ವರ್ಷಗಳಲ್ಲಿ ಕೊಳಚೆ ಮಂಡಳಿಯಿಂದ ನಿರ್ಮಿಸಿರುವ ಒಟ್ಟು ಮನೆಗಳ ಸಂಖ್ಯೆ ಎಷ್ಟು? ಯಾವ ಯಾವ ಪ್ರದೇಶದಲ್ಲಿ ಎಷ್ಟೆಷ್ಟು ಮನೆ ನಿರ್ಮಾಣ ಆಗಿದೆ ಹಾಗೂ ಇದಕ್ಕೆ ಖರ್ಚಾಗಿರುವ ಹಣ ಎಷ್ಟು?

ಆ) ಈ ಅವಧಿಯಲ್ಲಿ ವಾಸಕ್ಕೆ ಸ್ವಾಧೀನ ನೀಡಿರುವ ಮನೆಗಳೆಷ್ಟು? ಮನೆ ಕೆಲಸ ಮುಗಿದಿದ್ದರೂ ಅವರ ಸ್ವಾಧೀನಕ್ಕೆ ನೀಡದಿರುವ ಮನೆಗಳ ಸಂಖ್ಯೆ ಎಷ್ಟು?

ಇ) ಈ ರೀತಿ ಸ್ವಾಧೀನಕ್ಕೆ ನೀಡದಿರುವುದಕ್ಕೆ ಕಾರಣಗಳೇನು?

ಈ) ಕೊಳಚೆ ಪ್ರದೇಶಗಳ ಬೆಳವಣಿಗೆ ತಡೆಯಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು) :

ಅ) ಒಟ್ಟು 144 ಮನೆಗಳು

(ಲಕ್ಷ ರೂ.ಗಳಲ್ಲಿ)

ಕ್ರ. ಸಂ.	ಪ್ರದೇಶ	ನಿರ್ಮಾಣ ವಾಗಿರುವ ಮನೆಗಳು	ಖರ್ಚಾಗಿರುವ ಹಣ
1.	ಜನತಾ ಸಾಮಿಲ್ ಹಿಂಭಾಗದ ಕೊಳಚೆ ಪ್ರದೇಶ	12	8.50
2.	ಕ್ಯಾತಮಾರನಹಳ್ಳಿ ಬಡಾವಣೆ	48	15.60
3.	ನೆಲ್ಲೂರ್ ಶೆಡ್	84	27.00

ಆ) ಹಿಂದಿನ ಸಾಲುಗಳಲ್ಲಿ ನಿರ್ಮಿಸಲಾಗಿದ್ದು ಹಂಚಿಕೆಯಾಗದೆ ಬಾಕಿ ಉಳಿದಿದ್ದು ಒಟ್ಟು 259 ಮನೆಗಳನ್ನು 1995-96ನೇ ಸಾಲಿನಿಂದ 1998-99ನೇ ಸಾಲಿನ ಅವಧಿಯಲ್ಲಿ ಫಲಾನುಭವಿಗಳ ವಾಸಕ್ಕಾಗಿ ಸ್ವಾಧೀನಕ್ಕೆ ನೀಡಲಾಗಿದೆ. ಕೆಲಸ ಪೂರ್ಣಗೊಂಡಿದ್ದು, ಸ್ವಾಧೀನಕ್ಕೆ ನೀಡದಿರುವ ಮನೆಗಳು ಯಾವುದು ಇರುವುದಿಲ್ಲ.

ಇ) ಜನತಾ ಸಾಮಿಲ್ ಹಿಂಭಾಗದ 12 ಮನೆಗಳು ಮತ್ತು ನೆಲ್ಲೂರು ಶೆಡ್ ನ 84 ಮನೆಗಳು ಮುಕ್ತಾಯದ ಹಂತದಲ್ಲಿರುವ ಕಾರಣ ಸ್ವಾಧೀನಕ್ಕೆ ನೀಡಲಾಗಿರುವುದಿಲ್ಲ.

ಈ) ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಸೂಚಿಸಲಾಗಿದೆ.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೇ, ಮಾನ್ಯ ವಸತಿ ಸಚಿವರ ಪರವಾಗಿ ನಾನು ಈ ಬಗ್ಗೆ ಉತ್ತರವನ್ನು ಕೊಡುತ್ತೇನೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಮಾನ್ಯ ವಸತಿ ಸಚಿವರಿಗೆ ಸಂಬಂಧಪಟ್ಟಂತೆ ಈ ಪ್ರಶ್ನೆ ಇದೆ. ಅವರು ಈ ಸದನಕ್ಕೆ ಬಂದಿಲ್ಲ.

ಅಧ್ಯಕ್ಷರು : ಅವರು ಅರಕಲಗೂಡಿಗೆ ಒಬ್ಬ ವೀರಯೋಧನ ಶವ ಸಂಸ್ಕಾರದಲ್ಲಿ ಪಾಲ್ಗೊಳ್ಳಲು ಹೋಗಿದ್ದಾರೆ. ಆದುದರಿಂದ ಆ ಆಕ್ಷೇಪ ಸಲ್ಲದು.

ಶ್ರೀ ಎ. ರಾಮದಾಸ್ : ನನ್ನ ಮೊದಲನೇ ಪ್ರಶ್ನೆಗೆ ಉತ್ತರ ಕೊಡುವಾಗ, ನೆಲ್ಲೂರು ಶೆಡ್‌ನಲ್ಲಿ 84ಮನೆಗಳು ಪೂರ್ತಿಯಾಗಿವೆ. ಅದಕ್ಕೆ27ಲಕ್ಷ ರೂಪಾಯಿಗಳಷ್ಟು ಪೇಮೆಂಟ್ ಮಾಡಲಾಗಿದೆಯೆಂದು ಮಾನ್ಯ ಮಂತ್ರಿಯವರು ಹೇಳಿದ್ದಾರೆ. ಆದರೆ ನನ್ನ ಮೂರನೇ ಪ್ರಶ್ನೆಗೆ ಉತ್ತರಿಸುವಾಗ, 84 ಮನೆಗಳು ಇನ್ನು ಪೂರ್ತಿಯಾಗಿಲ್ಲವೆಂದೂ, ಹಾಗೂ ಅದನ್ನು ನಾವು ಸ್ವಾಧೀನಕ್ಕೆ ಕೊಡುವುದಕ್ಕಾಗಿಲ್ಲವೆಂದು ತದ್ವಿರುದ್ಧವಾದ ಉತ್ತರವನ್ನು ಅವರು ಕೊಟ್ಟಿದ್ದಾರೆ. ನನ್ನ ಎರಡನೆಯ ಪ್ರಶ್ನೆಗೆ ಉತ್ತರವಾಗಿ ಈಗಾಗಲೇ 259 ಮನೆಗಳು ಪೂರ್ತಿಯಾಗಿವೆ ಎಂದು ಹೇಳಿದ್ದಾರೆ. ಆದರೆ ಅಲ್ಲಿನ ಪರಿಸ್ಥಿತಿ ತಮ್ಮ ಗಮನಕ್ಕೆ ಏಕೆ ಬಂದಿಲ್ಲವೆಂಬುದು ಅರ್ಥವಾಗಿಲ್ಲ. 120 ಮನೆಗಳಿಗೆ ಕಳೆದ ಎರಡೂವರೆ ವರ್ಷದಿಂದ ಲೈಟ್ ಕೂಡದೇ, ಅಲ್ಲಿರುವಂತಹ ಕಂಟ್ರಾಕ್ಟರ್ ಪೇಮೆಂಟ್ ಕೂಡ ಕೊಡದೇ, ಆ ಮನೆಗಳು ಸಮಸ್ಯೆಯಾಗಿರುವುದು ತಮ್ಮ ಗಮನಕ್ಕೆ ಬಂದಿಲ್ಲವೆಂದು ಕಾಣುತ್ತದೆ. ಒಂದು ವಿಚಾರವನ್ನು ಮಾನ್ಯ ಸಚಿವರಲ್ಲಿ ಕೇಳುವುದೇನೆಂದರೆ, ಕಳೆದ ಒಂದೂವರೆ ವರ್ಷದಲ್ಲಿ ಇದೇ ಸದನದಲ್ಲಿ ಆ ವಿಚಾರ ಚರ್ಚೆಯಾಗಿತ್ತು. ಸುಮಾರು 72 ಮನೆಗಳಲ್ಲಿ ಅನ್‌ಆಥಾರೈಸ್ಡ್ ಆಗಿ ಬಂದು ಆಕ್ಯುಪೈ ಮಾಡಿಕೊಂಡು ಅಲ್ಲಿ ಲಾ ಅಂಡ್ ಆರ್ಡರ್ ಸಮಸ್ಯೆಯಾಗಿತ್ತು. ಖಾಲಿ ಮಾಡಿಸುವುದಕ್ಕೆ ಆಗದೇ ಇರುವಂತಹ ಪ್ರಸಂಗಗಳು ಇನ್ನೂ ಇತ್ಯರ್ಥವಾಗದೇ ಹಾಗೆಯೇ ಇದೆ. ಆದರೂ ಕೂಡ ಇಲ್ಲಿ ಅನಧಿಕೃತವಾಗಿ ಯಾರು ಇಲ್ಲ ಎಂದು ಹೇಳಿದ್ದಾರೆ. ತಾವು ವಿಚಾರಗಳನ್ನು ಮುಚ್ಚಿಡುವಂತಹ ವಿಷಯ ಏಕೆ ಮಾಡುತ್ತಿದ್ದೀರಿ?

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೇ, ಮೈಸೂರಿನಲ್ಲಿ ಒಟ್ಟು 144 ಮನೆಗಳನ್ನು ಸರ್ಕಾರ ಕಟ್ಟಿದೆ. ಜನತಾ ಸಾಮಿಲ್ ಹತ್ತಿರ 12, ಕ್ಯಾತಮಾರನಹಳ್ಳಿ ಬಡಾವಣೆಯಲ್ಲಿ 48 ಮನೆಗಳು, ನೆಲ್ಲೂರು ಶೆಡ್ ಎಂದರೆ ಈ ಮಾನ್ಯ ಶಾಸಕರ ಕ್ಷೇತ್ರ ಏನಿದೆ ಅಲ್ಲಿ 84 ಮನೆಗಳನ್ನು ಕಟ್ಟಿದ್ದು, ಆ ಮನೆಗಳಲ್ಲಿ ಅನಧಿಕೃತವಾಗಿ ಕೆಲವರು ಸೇರಿಕೊಂಡಿದ್ದಾರೆ. ಆ ಸ್ಲಂ ಬೋರ್ಡ್‌ನಲ್ಲಿ ಹಕ್ಕುಪತ್ರಗಳನ್ನು ಕೊಡುವುದಿಲ್ಲ. ಅವರಿಗೆ ಮನೆಯನ್ನು ಸ್ವಾಧೀನಕ್ಕೆ ಕೊಡುತ್ತೇವೆ. ಆ ಮನೆಗಳ ಅಳತೆ 15x20 ಅಡಿಗಳು ಇದೆ. ಆದರಲ್ಲಿ ಕೆಲವರು ವಾಸವಾಗಿರಬೇಕು. ಆದುದರಿಂದ ಅಲ್ಲಿ ಅನಧಿಕೃತವಾಗಿ ವಾಸ ಮಾಡುವವರನ್ನು

ಹೊರದೂಡಿ ನಿಜವಾದ ಫಲಾನುಭವಿಗಳನ್ನು ಆ ಮನೆಯ ಒಳಗಡೆ ವಾಸಕ್ಕೆ ಬಿಡಬೇಕು. ಅದರಲ್ಲಿ ಸ್ವಲ್ಪ ತಡವಾಗಿದೆ. ಮಾನ್ಯ ಸದಸ್ಯರು ಕಳೆದ ವರ್ಷ ಹೇಳಿದ ಉತ್ತರವನ್ನೇ ಮಾನ್ಯ ಮಂತ್ರಿಯವರು ಹೇಳುತ್ತಿದ್ದಾರೆಂದು ಹೇಳಿದ್ದಾರೆ. ನಾವು ಅದರ ಬಗ್ಗೆ ಈಗ ಅಧಿಕಾರಿಗಳಿಗೆ ಸೂಚನೆ ಕೊಟ್ಟು, ಕೂಡಲೇ ಅವರಿಂದ ಮನೆಗಳನ್ನು ತೆರವು ಮಾಡಿಸಿ ಫಲಾನುಭವಿಗಳನ್ನು ಒಳಗಡೆ ಬಿಡುವಂತಹ ಕೆಲಸವಾಗಬೇಕು. 1995ರಿಂದ 1999ನೇ ಸಾಲಿನ ಅವಧಿಯವರೆಗೂ ನಾವು 259 ಮನೆಗಳನ್ನು ಸ್ವಾಧೀನಕ್ಕೆ ಕೊಟ್ಟಿದ್ದೇವೆ. ಅದಲ್ಲದೆ ಈಗ ಮಾನ್ಯ ಸದಸ್ಯರು ಹೇಳುತ್ತಿರುವ ಮನೆಗಳು ಬೇರೆಯಾಗಿತ್ತು, ಅಲ್ಲಿ ಏನು ದೀಪಗಳ ವ್ಯವಸ್ಥೆ ಆಗಿಲ್ಲವೆಂದು ಇದೆ, ಅದನ್ನು ಸೇರಿಸಿ ಎಲ್ಲಾ ಮಾಡಿಕೊಡುತ್ತೇವೆ.

ಶ್ರೀ ಎ. ರಾಮದಾಸ್ : ಈ ಸದನ ಇವತ್ತು ಮುಗಿಯುತ್ತದೆ. ನಾವು ಕೊನೇ ಪ್ರಶ್ನೆ ಕೇಳುತ್ತಿದ್ದೇವೆ. ಒಂದೂವರೆ ವರ್ಷದಿಂದ 72 ಕುಟುಂಬಗಳು ಅಲ್ಲಿ ಅನಧಿಕೃತವಾಗಿ ಬಂದು ಸೇರಿಕೊಂಡಿದ್ದಾರೆ. ಯಾರು ಅಲ್ಲಿ ಕಷ್ಟಪಟ್ಟು ಕೂಲಿ ಮಾಡಿ ದುಡ್ಡು ಕಟ್ಟಿದ್ದರು ಅವರಿಗೆ ಕೊಡುವಂತಹ ವ್ಯವಸ್ಥೆಯಾಗಿಲ್ಲ. ಅಲ್ಲಿ ದೊಡ್ಡ ಗಲಾಟೆಯಾಗಿ ಮೈಸೂರಿನಲ್ಲಿ ಲಾ ಅಂಡ್ ಆರ್ಡರ್ ಪ್ರಾಬ್ಲಂ ಆಗಿತ್ತು. ಅದು ಇನ್ನೂ ಪರಿಹಾರವಾಗಿಲ್ಲ. ಅದು ಪರಿಹಾರವಾದರೆ ಸಾಕು, ನನ್ನ ಪ್ರಶ್ನೆಗೆ ಉತ್ತರ ಬಂದಹಾಗೆ ಆಗುತ್ತದೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಇದು ಹೇಗಾಗಿದೆ ಎಂದರೆ ಕಷ್ಟಪಟ್ಟು ಸಾಲಸೋಲ ಮಾಡಿ ಒಬ್ಬ ಮದುವೆ ಮಾಡಿಕೊಂಡು ಬಂದನಂತೆ. ಕಾದು ಕುಳಿತವನು ಆ ಹೆಣ್ಣನ್ನು ಕರೆದುಕೊಂಡು ಹೋದನಂತೆ, ಹಾಗೆ ಆಯಿತು. ಆ ರೀತಿ ಬೇರೆಯವರು ಅಲ್ಲಿ ಮನೆಗಳನ್ನು ಆಕ್ಯುಪೈ ಮಾಡಿಕೊಂಡಿದ್ದಾರೆ.

ಅಧ್ಯಕ್ಷರು : ನನ್ನ ಸಮಸ್ಯೆ ಏನೆಂದರೆ, ಮಾನ್ಯ ನಂಜೇಗೌಡರಿಗೆ ಅದು ಅರ್ಥವಾಯಿತು. ನನಗೆ ಆಗಲಿಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೇ, ಇನ್ನು ಅಲ್ಲಿ ಕೆಲವು ಸಣ್ಣಪುಟ್ಟ ಕೆಲಸಗಳು ಆಗಿಲ್ಲ. ಬಾಕಿ ಇರುವಂತಹ ಕೆಲಸಗಳನ್ನು ನಾವು ಮಾಡಿಕೊಡುತ್ತೇವೆ. ಜೊತೆಗೆ ಅನಧಿಕೃತವಾಗಿ ಇರುವವರನ್ನು ಪೋಲೀಸ್ ಫೋರ್ಸ್ ಅಥವಾ ಬೇರೆ ಯಾವ ರೀತಿ ಮಾಡಬೇಕೆಂದು ನೋಡಿ ಅತೀ ಶೀಘ್ರದಲ್ಲೇ ಅವರನ್ನು ಆಚೆ ಹಾಕಿ ನಿಜವಾಗಿ ಇರುವಂತಹ ಫಲಾನುಭವಿಗಳನ್ನು ಒಳಗಡೆ ಸೇರಿಸುವಂತಹ ಕಾರ್ಯವನ್ನು ನಾವು ಮಾಡುತ್ತೇವೆ.

ಬಿಜಾಪುರ ತಾಲ್ಲೂಕು ಬಬಲೇಶ್ವರ ಗ್ರಾಮಕ್ಕೆ ನೆದರ್‌ಲ್ಯಾಂಡ್ ನೆರವಿನಿಂದ ಕುಡಿಯುವ ನೀರಿನ ಯೋಜನೆ

306 - ಶ್ರೀ ಪಾಟೀಲ್ ಶಿವಾನಂದ ಸಿದ್ರಾಮಪ್ಪ (ತಿಕೋಟ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ವಾರ್ತಾ ಮತ್ತು ಪ್ರಚಾರ ಖಾತೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ತಾಲ್ಲೂಕು ಬಬಲೇಶ್ವರ ಗ್ರಾಮಕ್ಕೆ ನೆದರ್‌ಲ್ಯಾಂಡ್ ನೆರವಿನಿಂದ ಕುಡಿಯುವ